**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.**

**ಸತ್ರ ಪ್ರಕರಣ ಸಂಖ್ಯೆಃ 46/2023**

ದಿನಾಂಕಃ 23.10.2024
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. -1 ಅ.ಸಾ -2

**ಪಾಟೀ ಸವಾಲುಃ ಶ್ರೀ. ಎಂ.ಪಿ. ವಕೀಲರಿಂದ ಆರೋಪಿ-1 ರವರ ಪರಃ**

ನನ್ನ ತಮ್ಮನಿಗೆ ಸುಮಾರು 38 ವರ್ಷ ಆಗಿತ್ತು ಎನ್ನುವುದು ಸರಿ ಇದೆ. ಆರೋಪಿ-1 ರವರ ಮಗಳ ಪ್ರಕರಣದ ನಂತರ ನನ್ನ ತಮ್ಮನನ್ನು ಊರಿನಲ್ಲಿ ಇರುವುದು ಬೇಡ ಎಂದು ಬೆಂಗಳೂರಿನಲ್ಲಿ ನಾವು ಕೆಲಸಕ್ಕೆ ಸೇರಿಸಿದ್ದವು. ನನ್ನ ತಮ್ಮ ಕೆಲಸಕ್ಕೆ ಸೇರಿದ ಕಡೆ ಗಲಾಟೆ ಮಾಡಿಕೊಂಡು ವಾಪಸ್ಸು ಊರಿಗೆ ಬಂದು ಸೇರಿಕೊಂಡಿದ್ದ ಎನ್ನುವುದು ಸರಿ ಇದೆ. ನನ್ನ ತಮ್ಮ ನಮ್ಮೊಂದಿಗೆ ಕರೆ ಮಾಡಿದಾಗ ಕೇವಲ ಯೋಗ ಕ್ಷೇಮದ ವಿಚಾರ ಮಾತನಾಡುತ್ತಿದ್ದು ಹೆಚ್ಚಿಗೆ ಏನು ಹೇಳುತ್ತಿರಲಿಲ್ಲ ಎನ್ನುವುದು ಸರಿ ಇದೆ. ನನ್ನ ತಾಯಿ ಬೆಂಗಳೂರಿನಿಂದ ಯಾರೋ ಎರಡು ಮೂರು ಮೋಟಾರ್ ಸೈಕಲ್ ನಲ್ಲಿ ಬಂದು ನನ್ನ ತಮ್ಮನನ್ನು ಕರೆದುಕೊಂಡು ಹೋಗಿದ್ದಾಗಿ ತಿಳಿಸಿದ್ದರು ಎನ್ನುವುದು ಸರಿ ಇದೆ.

ನಾನು ಕೂಡ ಕಂಟ್ರೋಲ್ ರೂಮ್ ಗೆ ನನ್ನ ತಾಯಿ ಬೆಂಗಳೂರಿನಿಂದ ಯಾರೋ ಎರಡು ಮೂರು ಮೋಟಾರ್ ಸೈಕಲ್ ನಲ್ಲಿ ಬಂದು ನನ್ನ ತಮ್ಮನನ್ನು ಕರೆದುಕೊಂಡು ಹೋಗಿದ್ದಾಗಿ ತಿಳಿಸಿದ್ದರು

ಎಂದು ಹೇಳಿರುತ್ತೇನೆ ಎನ್ನುವುದು ಸರಿ ಇದೆ. ನಾನು ಪೋಲಿಸರಿಗೆ ದೂರು ಕೊಡುವಾಗ ಆರೋಪಿ-1 ನಮ್ಮ ಪಕ್ಕದ ಮನೆಯವರಾಗಿದ್ದು ಆಗಾಗ ಗಲಾಟೆ ಮಾಡುತ್ತಿದ್ದುದ್ದರಿಂದ ಅನುಮಾನದ ಮೇಲೆ ಆರೋಪಿ-1 ರವರ ಮತ್ತು ಆತನ ಭಾವ ಮೈದುನ ಆರೋಪಿ-2 ರವರ ಹೆಸರು ಹೇಳಿರುತ್ತೇನೆ. ನನ್ನ ತಾಯಿ ಆರೋಪಿ-1 ರವರ ಮಗಳ ಪ್ರಕರಣ ಆದ ನಂತರ ಯಾವತ್ತು ಆರೋಪಿ-1 ರವರ ಕುರಿತು ಕರೆ ಮಾಡಿದಾಗ ಮಾತನಾಡಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿ-2 ಮತ್ತು 3 ರವರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.